**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ , ಪಿರಿಯಾಪಟ್ಟಣ**

**<u>ಸಿಸಿ. ಸಂಃ 13/2017</u>**

| | | |
|---|---|---|
| **ಹೆಸರು** | **:ಆಶಾ ಪಿ.ಆರ್.** | **ಪಿಡಬ್ಲೂಃ 06** |
| **ತಂದೆ/ಗಂಡನ ಹೆಸರು** | **:ವಿಜಯ್ ಕುಮಾರ್ ಎಂ.ಸಿ.** | |
| **ವಯಸ್ಸು** | **:57 ವರ್ಷ** | |
| **ಉದ್ಯೋಗ** | **:ಸಹ ಶಿಕ್ಷಕಿ** | |
| **ವಾಸಸ್ಥಳ** | **:ಗುಡ್ಡೆಹೊಸೂರು** | |

**<u>ದಿಃ*15.09.2023* ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.</u>**

**<u>ಮುಖ್ಯ ವಿಚಾರಣೆ ಃ ಫಿರ್ಯಾದಿದಾರರ ಪರ ಶ್ರೀ.ಎಸ್.ಎಸ್. ವಕೀಲರಿಂದಃ</u>**

ನಾನು ಸಹ ಶಿಕ್ಷಕಿಯಾಗಿ ದಿನಾಂಕಃ *01-06-98* ರಿಂದ ಮಿಳಿಂದ ವಿದ್ಯಾ ಸಂಸ್ಥೆಯ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆರೋಪಿ ಗೊತ್ತು. ಅವರು ಸಂಸ್ಥೆಯಲ್ಲಿ ಧರ್ಮದರ್ಶಿಯಾಗಿದ್ದರು. ನನ್ನನ್ನು ಕೆಲಸಕ್ಕೆ ಆರೋಪಿಯೇ ಸೇರಿಸಿಕೊಂಡಿದ್ದಾರೆ. ನಾನು ಕೆಲಸಕ್ಕೆ ಸೇರಿದಾಗ ಶಾಲೆಯಲ್ಲಿ ಎಲ್.ಕೆ.ಜಿ. ಇಂದ *9* ನೇ ತರಗತಿವರೆಗೆ ಶಾಲೆಗಳು ಇದ್ದವು. ಅಭಿವೃದಿ ಶುಲ್ಕವನ್ನು ಪ್ರತಿ ನರ್ಸರಿ ವಿದ್ಯಾರ್ಥಿಯಿಂದ ವಾರ್ಷಿಕ ರೂ.*250/-* ರೂಪಾಯಿ ಪಡೆಯುತ್ತಿದ್ದೆವು. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿದ ವಾರ್ಷಿಕ ರೂ.*300/-* ರೂಪಾಯಿ ಪಡೆಯುತ್ತಿದ್ದೆವು. ಸದರಿ ಹಣವನ್ನು ವಿದ್ಯಾರ್ಥಿಗಳಿಂದ ಸಹ ಶಿಕ್ಷಕಿಯರು ಆದ ಜಲಜಾಕ್ಷಿ ಮತ್ತು ಗೀತಾ ರವರು ಪಡೆದುಕೊಳ್ಳುತ್ತಿದ್ದರು. ಅವರು ಹಣವನ್ನು ಆರೋಪಿ ಕಡೆ ಕೊಡುತ್ತಿದ್ದರು. ಆರೋಪಿ ಸದರಿ ಹಣದಲ್ಲಿ ಸಂಬಳವನ್ನು ಕೊಡುತ್ತಿದ್ದರು ಮತ್ತು ಉಳಿದ ಹಣವನ್ನು ಅವರೇ ಇಟ್ಟುಕೊಳ್ಳುತ್ತಿದ್ದರು.

*2006* ರವರೆಗೆ ನನಗೆ ಧರ್ಮದರ್ಶಿಯಾದ ಆರೋಪಿ ಒಬ್ಬರು ಮಾತ್ರ ಗೊತ್ತಿದ್ದರು. ನಮ್ಮ ಕಡೆಯಿಂದ ಪಡೆದ ಹಣದ ಬಗ್ಗೆ ಆರೋಪಿ *2006* ನೇ ಸಾಲಿನ ವರೆಗೆ ಯಾವುದೇ ರಶೀದಿ ಹಾಕುತ್ತಿರಲಿಲ್ಲ. *2006* ರಲ್ಲಿ ಆರೋಪಿ, ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ, ಲೆಕ್ಕ

ಪರಿಶೋಧಕರು ಮತ್ತು ಶಿಕ್ಷಕ, ಶಿಕ್ಷಕಿಯರ ಸಭೆ ನಡೆಯಿತು. ಸಭೆಯಲ್ಲಿ ಸಂಸ್ಥೆಗೆ ಬರುವ ಎಲ್ಲಾ ಹಣದ ಬಗ್ಗೆ ರಶೀದಿ ಹಾಕಬೇಕು ಮತ್ತು ಹಣವನ್ನು ಬ್ಯಾಂಕಿಗೆ ಜಮಾ ಮಾಡಬೇಕು ಎಂದು ತೀರ್ಮಾನಿಸಲಾಯಿತು.

2006 ನೇ ಸಾಲಿನಲ್ಲಿ ಶಾಲೆಗೆ ಒಂದು ವಾಹನ ಖರೀದಿ ಮಾಡಿದ್ದರು. ಅದಕ್ಕೆ ವಿದ್ಯಾರ್ಥಿಗಳಿಂದ ವಾಹನ ಶುಲ್ಕ ಸಂಗ್ರಹ ಮಾಡುತ್ತಿದ್ದೇವು. ಆ ರೀತಿ ಸಂಗ್ರಹ ಮಾಡಿದ ಹಣಕ್ಕೆ ರಶೀದಿ ಹಾಕಿ ಬ್ಯಾಂಕಿಗೆ ಜಮಾ ಮಾಡುತ್ತಿರಲಿಲ್ಲ. ವಾಹನ ಶುಲ್ಕ ಸಂಗ್ರಹದ ಜವಾಬ್ದಾರಿ ಸಹ ಶಿಕ್ಷಕಿಯಾದ ಸುಲೋಚನ ರವರು ನೋಡಿಕೊಳ್ಳುತ್ತಿದ್ದರು. ನಾನು ಶಾಲ ಶುಲ್ಕದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದೆ. ಶಾಲಾ ಶುಲ್ಕವನ್ನು ನಾನು ಬ್ಯಾಂಕಿಗೆ ಜಮಾ ಮಾಡುತ್ತಿದೆ. ಆ ರೀತಿ 2009 ರ ವರೆಗೆ ನಡೆದಿರುತ್ತದೆ.

2009 ರಲ್ಲಿ ಆರೋಪಿ, ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ, ಮತ್ತು ಲೆಕ್ಕ ಪರಿಶೋಧಕರು ಮತ್ತು ಶಿಕ್ಷಕ, ಶಿಕ್ಷಕಿಯರ ಸಭೆ ನಡೆಯಿತು. ಸಭೆಯಲ್ಲಿ ಯಾವುದೇ ಹಣವಾಗಲಿ ಅದಕ್ಕೆ ರಶೀದಿ ಹಾಕಬೇಕು ಮತ್ತು ಹಣವನ್ನು ಬ್ಯಾಂಕಿಗೆ ಜಮಾ ಮಾಡಬೇಕು ಎಂದು ತೀರ್ಮಾನಿಸಲಾಯಿತು. ಸದರಿ ಸಭೆಯಲ್ಲಿ ನಾನು ಹಾಜರು ಇದ್ದು ನಡಾವಳಿಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ನಿ.ಪಿ.7 ರಲ್ಲಿ 6 ನೇ ಪುಟದಲ್ಲಿ ಇರುವ ತನ್ನ ಸಹಿ ಗುರುತಿಸಿದ್ದು ಅದನ್ನು ನಿ.ಪಿ7(ಬಿ) ಎಂದು ಗುರುತಿಸಲಾಯಿತು. ನಡಾವಳಿ ಪ್ರಕಾರ ನನಗೆ ಲೆಕ್ಕ ಪತ್ರಗಳನ್ನು ನೋಡುವ ಜವಾಬ್ದಾರಿ ಕೊಟ್ಟಿದ್ದರು. ಅದರ ಬಗ್ಗೆ ಸುತ್ತೋಲೆ ಮಾಡಿದ್ದರ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ನಿ.ಪಿ.8 ರಲ್ಲಿ ಇರುವ ಸಹಿ ಗುರುತಿಸಿದ್ದು ಅದನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. 2009 ರಲ್ಲಿ ಗೋವಿಂದಯ್ಯ ರವರು ರಶೀದಿ ಪುಸ್ತಕಗಳನ್ನು ನನಗೆ ಒದಗಿಸಿದ್ದರು. ಶಾಲೆಗೆ ಬಂದ ಯಾವುದೇ ಹಣವಾಗಲಿ ಅದಕ್ಕೆ ನಾನು ರಶೀದಿ ಹಾಕಿ ಬ್ಯಾಂಕಿಗೆ ಜಮಾ ಮಾಡುತ್ತಿದೆ. ಸಿಂಡಿಕೇಟ್ ಬ್ಯಾಂಕ್ ಬೈಲಕುಪ್ಪೆ ಬ್ರಾಂಚ್‌ನಲ್ಲಿ 3 ಖಾತೆಗಳನ್ನು ತೆರೆದಿದ್ದೆವು. ಮಿಳಿಂದ ವಿದ್ಯಾ

ಸಂಸ್ಥೆಯ ಖಾತೆಯನ್ನು ವ್ಯವಸ್ಥಾಪಕ ಧರ್ಮದರ್ಶಿಗಳು ನಿರ್ವಹಿಸುತ್ತಿದ್ದರು. ಪ್ರೌಢ ಶಾಲೆ ಮತ್ತು ಪ್ರಾಥಮಿಕ ಶಾಲೆಯ ಖಾತೆಗಳನ್ನು ವ್ಯವಸ್ಥಾಪಕ ಧರ್ಮದರ್ಶಿ ಮತ್ತು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು ನಿರ್ವಹಿಸುತ್ತಿದ್ದರು.

ಪ್ರತಿಯೊಂದು ಖರ್ಚು ವೆಚ್ಚಗಳ ಪ್ರಸ್ತಾವನೆಯನ್ನು ಬರವಣಿಗೆಯಲ್ಲಿ ಧರ್ಮದರ್ಶಿಗಳಾದ ದೊಡ್ಡಣ್ಣ ರವರಿಗೆ ಸಲ್ಲಿಸುತ್ತಿದ್ದೆ. ಅವರು ಅದನ್ನು ಅನುಮೋದಿಸಿದ ನಂತರ ವ್ಯವಸ್ಥಾಪಕ ಧರ್ಮದರ್ಶಿ ರವರ ಕಡೆಯಿಂದ ನಾವು ಚೆಕ್ ಮೂಲಕ ಹಣ ಪಾವತಿ ಮಾಡುತ್ತಿದ್ದೆವು. ನಿ.ಪಿ.39 ನಾನು ಕೊಟ್ಟ ಪ್ರಸ್ತಾವನೆಗಳು ಇರುತ್ತವೆ, ಅವುಗಳಲ್ಲಿ ಪ್ರಸ್ತಾವನೆ ಕೊಟ್ಟ ಬಗ್ಗೆ ನಾನು ಸಹಿ ಮಾಡಿದ್ದೇನೆ. ಅನುಮೋದನೆ ಮಾಡಿದ ಬಗ್ಗೆ ಆರೋಪಿ ಸಹಿ ಮಾಡಿದ್ದಾರೆ. ಚೆಕ್ ಕೊಟ್ಟ ಬಗ್ಗೆ ಗೋವಿಂದಯ್ಯ ರವರು ಸಹಿ ಮಾಡಿದ್ದಾರೆ. ನಿ.ಪಿ.39 ರಲ್ಲಿ ಇರುವ ಸಾಕ್ಷಿಯ ಒಂದು ಸಹಿಯನ್ನು ನಿ.ಪಿ.39(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿ.ಪಿ.39 ರಲ್ಲಿ ಇರುವ ಆರೋಪಿಯ ಒಂದು ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ.39(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿ.ಪಿ.39 ರಲ್ಲಿ ಇರುವ ಗೋವಿಂದಯ್ಯ ರವರ ಸಹಿ ಗುರುತಿಸಿದ್ದು ಅದನ್ನು ನಿ.ಪಿ.39(ಸಿ) ಎಂದು ಗುರುತಿಸಲಾಯಿತು. ನಿ.ಪಿ.39 ರಲ್ಲಿ ಇರುವ ಎಲ್ಲಾ ಪ್ರಸ್ತಾವನೆಗಳಿಗೆ ನನ್ನ ಸಹಿ ಇರುತ್ತದೆ.

2010 ನೇ ಸಾಲಿನಲ್ಲಿ ಗೋವಿಂದಯ್ಯ ರವರು ಪ್ರಸ್ತಾವನೆಯನ್ನು ಆರೋಪಿ ಕಡೆಯಿಂದ ಅನುಮೋದನೆ ಮಾಡಿಸುವುದು ಬೇಡ, ನೇರವಾಗಿ ನನಗೆ ಸಲ್ಲಿಸಿ ಎಂದು ತಿಳಿಸಿದರು. ಆಗ ಆರೋಪಿ ಎಲ್ಲಾ ಶಿಕ್ಷಕರ ಸಮಕ್ಷಮದಲ್ಲಿ ನನಗೆ ನಿಂದನೆ ಮಾಡಿದ್ದರು. ಅದರ ಬಗ್ಗೆ ನಾನು ದೂರನ್ನು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ಕೊಟ್ಟಿದ್ದೇನೆ. ಸಾಕ್ಷಿ ನಿ.ಪಿ.20 ರಲ್ಲಿ ಇರುವ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.20(ಎ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಬಿ) ಎಂದು ಗುರುತಿಸಲಾಯಿತು. ದೂರನ್ನು

ನಾನು ಮತ್ತು ಇತರೆ ಶಿಕ್ಷಕರು ಸೇರಿ ಕೊಟ್ಟಿದ್ದೇವೆ. ದೈಹಿಕ ಶಿಕ್ಷಕರಾದ ಕೃಷ್ಣ ರವರು ದೂರು ಕೊಟ್ಟಿದ್ದಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ದೂರನ್ನು ನಿ.ಪಿ.20(ಸಿ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಡಿ) ಎಂದು ಗುರುತಿಸಲಾಯಿತು.

ಹಣವನ್ನು ಬ್ಯಾಂಕಿಗೆ ಯಾಕೆ ಜಮಾ ಮಾಡುತ್ತಿರಲಿಲ್ಲ ಎಂದು ಕೇಳಿದ್ದಕೆ ನಾವು ಎಲ್ಲಾ ಶಿಕ್ಷಕರು ಸೇರಿಕೊಂಡು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ಬರವಣಿಗೆ ಮೂಲಕ ತಿಳಿಸಿರುತ್ತೇವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.20(ಇ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಎಫ್) ಎಂದು ಗುರುತಿಸಲಾಯಿತು.

ಸಂಗ್ರಹ ಮಾಡಿದ ವಾಹನ ಶುಲ್ಕವನ್ನು ಬ್ಯಾಂಕಿಗೆ ಯಾಕೆ ಜಮಾ ಮಾಡುತ್ತಿರಲಿಲ್ಲ ಎನ್ನುವುದರ ಬಗ್ಗೆ ಮುಖ್ಯ ಶಿಕ್ಷಕಿ ಸುಲೋಚನ ರವರು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ಬರವಣಿಗೆ ಮೂಲಕ ತಿಳಿಸಿದ್ದಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.20(ಜಿ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಹೆಚ್) ಎಂದು ಗುರುತಿಸಲಾಯಿತು.

ಸಹ ಶಿಕ್ಷಕಿ ಹೇಮಾವತಿ ರವರು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ವಿದ್ಯಾರ್ಥಿಗಳಿಂದ ಪಡೆದ ಅಭಿವೃದಿ ಶುಲ್ಕವನ್ನು ದೊಡ್ಡಣ್ಣ ರವರಿಗೆ ಕೊಟ್ಟಿದ್ದೇನೆ ಎಂದು ಬರವಣಿಗೆ ಮೂಲಕ ತಿಳಿಸಿದ್ದಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.20(ಐ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಜೆ) ಎಂದು ಗುರುತಿಸಲಾಯಿತು.

ಸಹ ಶಿಕ್ಷಕಿ ಜಲಜಾಕ್ಷಿ ರವರು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ವಿದ್ಯಾರ್ಥಿಗಳಿಂದ ಪಡೆದ ಅಭಿವೃದಿ ಶುಲ್ಕವನ್ನು ದೊಡ್ಡಣ್ಣ ರವರಿಗೆ ಕೊಟ್ಟಿದ್ದೇನೆ ಎಂದು ಬರವಣಿಗೆ ಮೂಲಕ ತಿಳಿಸಿದ್ದಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.20(ಕೆ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಎಲ್) ಎಂದು ಗುರುತಿಸಲಾಯಿತು.

ಸಹ ಶಿಕ್ಷಕಿ ಗೀತಾ ರವರು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ವಿದ್ಯಾರ್ಥಿಗಳಿಂದ ಪಡೆದ ಅಭಿವೃದಿ ಶುಲ್ಕವನ್ನು ದೊಡ್ಡಣ್ಣ ರವರಿಗೆ ಕೊಟ್ಟಿದ್ದೇನೆ ಎಂದು ಬರವಣಿಗೆ ಮೂಲಕ ತಿಳಿಸಿದ್ದಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.20(ಎಂ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಎನ್) ಎಂದು ಗುರುತಿಸಲಾಯಿತು.

ನಾನು ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕದ ಬಗ್ಗೆ ರಶೀದಿ ಕೊಟ್ಟುತ್ತಿದ್ದೇನೆ ಮತ್ತು ಬೇರೆ ಮೂಲದ ಹಣದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಬರವಣಿಗೆ ಮೂಲಕ ತಿಳಿಸಿದ್ದೇನೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.20(ಒ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.20(ಪಿ) ಎಂದು ಗುರುತಿಸಲಾಯಿತು.

2010 ನೇ ಸಾಲಿನಲ್ಲಿ ದೊಡ್ಡಣ್ಣ ರವರ ಹೆಂಡತಿಯ ತಂದೆ ಚೆನ್ನಯ್ಯ ರವರು ಶಾಲಾ ಶುಲ್ಕವನ್ನು ರೂ.500/-ಗಳಿಗೆ ಹೆಚ್ಚಿಸಿದ ಬಗ್ಗೆ ನನಗೆ ಮತ್ತು ಇತರೆ ಶಿಕ್ಷಕರಿಗೆ ನಿಂದನೆ ಮಾಡಿದ್ದರು ಅದರ ಬಗ್ಗೆ ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ದೂರನ್ನು ಕೊಟ್ಟಿದ್ದೇನೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.29(ಎ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.29(ಬಿ) ಎಂದು ಗುರುತಿಸಲಾಯಿತು.

ಆರೋಪಿ ಮನೆಯಲ್ಲಿ ಇದ್ದ ಶಾಲೆಯ ಪಾತ್ರೆಗಳನ್ನು ತರಲು ಹೋದಾಗ ಶಿಕ್ಷಕರಿಗೆ ನಿಂದಿಸಿದ ಬಗ್ಗೆ ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ದೂರನ್ನು ಕೊಟ್ಟಿದ್ದೇವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.29(ಸಿ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.29(ಡಿ) ಎಂದು ಗುರುತಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯಾ ನಿರ್ವಹಣಾಧಿಕಾರಿ ಶಾಲೆಗೆ ಬಂದಿದ್ದಾಗ ಆರೋಪಿಯ ಮಾವ ಚೆನ್ನಯ್ಯ ರವರು ಶಿಕ್ಷಕರಿಗೆ ನಿಂದಿಸಿದ ಬಗ್ಗೆ ವ್ಯವಸ್ಥಾಪಕ ಧರ್ಮದರ್ಶಿಗಳಿಗೆ ದೂರನ್ನು ಕೊಟ್ಟಿದ್ದೇವೆ.

ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.29(ಇ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.29(ಎಫ್) ಎಂದು ಗುರುತಿಸಲಾಯಿತು.

ನಾನು ವಿಚಾರಣಾಧಿಕಾರಿಗಳ ಸಮ್ಮುಖದಲ್ಲಿ ಹೇಳಿಕೆ ಕೊಟ್ಟಿದ್ದೇನೆ ಸದರಿ ದಾಖಲೆಯನ್ನು ನಿ.ಪಿ.41(ಎ) ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.41(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**